ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. Ambedkar Veedhi, Bengaluru,
E-mail ID: registrarevlubcu@gmail.com, Ph.No: 22295559

NO.BCU/EXAM/BOS PANEL/UG/PG EXAMS/SEM/2019-20. Date: 22-07-2019.

ಇವರಿಗೆ,
ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು
ಕಲಾ/ವಿಜ್ಞಾನ/ವಾಣಿಜ್ಯ/ಶಿಕ್ಷಣ/ದೈಹಿಕ ಶಿಕ್ಷಣ,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು.

ಮಾನ್ಯರೆ,

**ವಿಷಯ: 2019–20ನೇ ಸಾಲಿನ ಅಂತಿಮ ಪರೀಕ್ಷಕರ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಹಾಕಲಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ಯಾವುದೇ ಲೋಪದೋಷಗಳು ಕಂಡು ಬಂದರೆ ಮಾಹಿತಿ ನೀಡಲು ಕೋರುವ ಬಗ್ಗೆ.**

**ಉಲ್ಲೇಖ:** 1. NO.BCU/EXAM/BOS PANEL/UG/PG EXAMS/SEM/2019-20 dated 05.03.2019
2. NO.BCU/EXAM/BOS PANEL/UG/PG EXAMS/SEM/2019-20 Dated 02.05.2019

*****

ಮೇಲಿನ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ದಿನಾಂಕ 05.03.2019 ಮತ್ತು ವಿಶ್ವವಿದ್ಯಾಲಯದ ನೆನಪೋಲೆ ದಿನಾಂಕ 02.05.2019ರ ಪ್ರಕಾರ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರಿಗೆ ಆಯಾ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಭೋದಕರ ಹೆಸರುಗಳನ್ನು ಕಳುಹಿಸುವಂತೆ ಕೋರಿ, ಈ ಹೆಸರುಗಳನ್ನು BOS ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆದು ಪರೀಕ್ಷಕರ ಪಟ್ಟಿಯನ್ನು ತಯಾರಿಸಬೇಕಾಗಿದೆಯೆಂದು ತಿಳಿಸಲಾಗಿತ್ತು, ಕಾಲೇಜು ಪ್ರಾಂಶುಪಾಲರುಗಳಿಂದ ಬಂದಿರುವ ಭೋದಕರ ಪಟ್ಟಿಯನ್ನು ಗಣನೆಗೆ ತೆಗೆದುಕೊಂಡು, ಇದಕ್ಕೆ ಅನುಗುಣವಾಗಿ ಪರೀಕ್ಷಕರ ವಿಷಯವಾರು ಪಟ್ಟಿ ಸಿದ್ಧವಾಗಿದ್ದು, ಆ ಪಟ್ಟಿಗಳನ್ನು BOS ಮುಂದೆ ಮಂಡಿಸಬೇಕಾಗಿದ್ದು, ಈ ಪಟ್ಟಿಯಲ್ಲಿ ಲೋಪದೋಷಗಳೇನಾದರೂ ಇದ್ದಲ್ಲಿ, ಅಂದರೆ, ಕೆಲವು ಕಾಲೇಜುಗಳ ಪರೀಕ್ಷಕರ ಪಟ್ಟಿಯಲ್ಲಿ ಹಿಂದಿನ ಕಾಲೇಜಿನ ಸೇವೆಯ ಜೊತೆ ಈಗಿರುವ ಕಾಲೇಜಿನ ಸೇವೆಯನ್ನು ಕೂಡ ಸೇರಿಸಿ ಬೇರೆ ಬೇರೆ ವರ್ಷಗಳ ಸೇವೆ ಅವಧಿಯೆಂದು ತೋರಿಸಲಾಗಿದ್ದು, ಹಿಂದಿನ ಕಾಲೇಜುಗಳ ಸೇವೆಯ ಬಗ್ಗೆ ಯಾವುದೇ ದಾಖಲಾತಿಗಳನ್ನು ಲಗತ್ತಿಸದೆ ಇರುವುದರಿಂದ **Length of Service**ನ್ನು ಲೆಕ್ಕಹಾಕುವುದು ಕಷ್ಟಕರವಾಗುವುದರಿಂದ, ನಾವು ತಯಾರಿಸಿರುವ ಪರೀಕ್ಷಕರ ಪಟ್ಟಿಯನ್ನು BCU ವೆಬ್‌ಸೈಟ್‌ನಲ್ಲಿ ಹಾಕಲಾಗಿದ್ದು, ತಾವುಗಳು ಒದಗಿಸಿರುವ ಪಟ್ಟಿಗೂ ಈಗ ಪ್ರಕಟಿಸಿರುವ ಪಟ್ಟಿಗೂ ವ್ಯತ್ಯಾಸಗಳಿದ್ದಲ್ಲಿ ಖಚಿತಪಡಿಸಿಕೊಂಡು ತಮ್ಮ ತಮ್ಮ ಸೇವೆಯ ಅವಧಿಯಲ್ಲಿ ಯಾವುದಾದರು ಲೋಪದೋಷವಿದ್ದಲ್ಲಿ, ಒಂದು ವಾರದೊಳಗಾಗಿ ಪರೀಕ್ಷಾ ವಿಭಾಗ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು ಇವರ ಗಮನಕ್ಕೆ ತಂದು ತಿದ್ದುಪಡಿ ಮಾಡಿಸಿಕೊಳ್ಳಬೇಕೆಂದು ಕೋರುತ್ತೇನೆ. ಅಂತಿಮ ಪಟ್ಟಿ ತಯಾರಾದ ನಂತರ ಬರುವ ತಿದ್ದುಪಡಿ ಕೋರಿಕೆಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ತಮ್ಮ ವಿಶ್ವಾಸಿ,

22/7/19

ಕುಲಸಚಿವರು (ಮೌಲ್ಯಮಾಪನ)